**ತೆಂಗಿಗೆ ತಗುಲಿದ ಬೆಂಕಿ ರೋಗವನ್ನು ತಪ್ಪಿಸುವುದು.**

1295 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕೃಷಿ ಮತ್ತು ತೋಟಗಾರಿಕೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ತೆಂಗಿಗೆ ತಗುಲಿದ ಕರಿತಲೆ ಹುಳು ಮತ್ತು ಬೆಂಕಿ ರೋಗಗಳನ್ನು ತಪ್ಪಿಸಲು ಸರ್ಕಾರ ಏನು ಕ್ರಮ ತೆಗೆದುಕೊಂಡಿದೆ?*

*ಆ) ಇದುವರೆಗೆ ಕರಿತಲೆ ಹುಳು ಪೀಡೆಗೆ ಸಿಕ್ಕಿರುವ ತೆಂಗು ಪ್ರದೇಶಗಳು ಯಾವುವು?*

*ಇ) ಕರಿತಲೆ ಹುಳುವಿನ ಸೋಂಕಿನಿಂದ ನಾಶವಾದ ತೆಂಗಿನ ಮರಗಳ ರೈತರಿಗೆ ಪರಿಹಾರ ಕೊಡುವ ಬಗ್ಗೆ ಸರ್ಕಾರ ಆಲೋಚಿಸಿದೆಯೇ?*

ಶ್ರೀ ಜಿ. ಪುಟ್ಟಸ್ವಾಮಿಗೌಡ (ಕೃಷಿ ಮತ್ತು ತೋಟಗಾರಿಕೆ ಸಚಿವರು):

ಅ) ತೋಟಗಾರಿಕೆ ಇಲಾಖಾ ವತಿಯಿಂದ, ತೆಂಗು ಬೆಳೆಗೆ ಬೀಳುವ ಕಪ್ಪುತಲೆ ಕಂಬಳಿ ಹುಳುವಿನ ನಿಯಂತ್ರಣದ ಬಗ್ಗೆ ರೈತರಿಗೆ ಸೂಕ್ತ ಮಾರ್ಗದರ್ಶನ ನೀಡಲಾಗುತ್ತಿದ್ದು, ಪರಿಣಾಮಕಾರಿಯಾಗಿ ತಡೆಗಟ್ಟುವುದಕ್ಕಾಗಿ ಇಲಾಖೆಯಲ್ಲಿ ಪರೋಪ ಜೀವಿಗಳನ್ನು ಉತ್ಪಾದಿಸಿ ಕೀಟ ಪೀಡಿತ ಪ್ರದೇಶಗಳಿಗೆ ಉಚಿತವಾಗಿ ಹಂಚಲಾಗುತ್ತದೆ. ಕೀಟಬಾದೆ ತೀವ್ರವಾಗಿರುವ ಪ್ರದೇಶದಲ್ಲಿ ಕೀಟನಾಶಕಗಳನ್ನು ಸಹ ರಿಯಾಯಿತಿ ದರದಲ್ಲಿ ರೈತರಿಗೆ ವಿತರಸಲಾಗುತ್ತದೆ. ರಾಜ್ಯದಲ್ಲಿ ಬೆಂಕಿರೋಗ ಬಾಧೆ ಇರುವುದು ಕಂಡು ಬಂದಿಲ್ಲ.

ಆ) ತೆಂಗು ಬೆಳೆಯುವ ಜಿಲ್ಲೆಗಳಾದ ಶಿವಮೊಗ್ಗ ದಕ್ಷಿಣ ಕನ್ನಡ, ಚಿತ್ರದುರ್ಗ, ಉತ್ತರ ಕನ್ನಡ, ಹಾಸನ, ಚಿಕ್ಕಮಗಳೂರು, ತುಮಕೂರು, ಮೈಸೂರು, ಮಂಡ್ಯ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಈ ಕೀಟ ಹಾವಳಿ ಇರುತ್ತದೆ.

ಇ) ತೆಂಗು ಬೆಳೆಗಾರರಿಗೆ ಪರಿಹಾರ ಕೊಡುವ ಯೋಜನೆ ಯಾವುದೂ ಇರುವುದಿಲ್ಲ.

**ರಾಜ್ಯದಲ್ಲಿರುವ ಹತ್ತಿ ಗಿರಣಿಗಳ ಬಗ್ಗೆ**

1291 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಾರ್ಮಿಕ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ರಾಜ್ಯದಲ್ಲಿನ ಸರ್ಕಾರ ಹಾಗೂ ಖಾಸಗಿ ಒಡತನಕ್ಕೆ ಒಳಪಟ್ಟ ಮುಚ್ಚಿರುವ ಹತ್ತಿ ಗಿರಣಿಗಳು ಹಾಗೂ ಇತರೆ ಕಾರ್ಖಾನೆಗಳು ಎಷ್ಟು?*

*ಆ) ಇದರಿಂದಾಗಿ ಬೀದಿ ಪಾಲಾಗಿರುವ ಕಾರ್ಮಿಕರ ಸಂಖ್ಯೆ ಎಷ್ಟು?*

*ಇ) ಕಾರ್ಮಿಕ ನ್ಯಾಯಾಲಯಗಳಲ್ಲಿ ಇತ್ಯರ್ಥವಾಗದೇ ಇರುವ ಮೊಕದ್ದಮೆಗಳೆಷ್ಟು?*

*ಈ) ಮೈಸೂರಿನ ಕೃಷ್ಣರಾಜೇಂದ್ರ ಗಿರಣಿಯನ್ನು ತೆಗೆಸುವ ಬಗ್ಗೆ ಸರ್ಕಾರ ಪ್ರಯತ್ನ ಮಾಡಿದೆಯೇ?*

ಶ್ರೀ ಸಿ.ಎಸ್. ನಾಡಗೌಡ (ಕಾರ್ಮಿಕ ರಾಜ್ಯ ಸಚಿವರು):

ಅ)

1. ಸರ್ಕಾರಿ (ಸಹಕಾರಿ) ಹತ್ತಿ ಗಿರಣಿಗಳು -4
2. ಖಾಸಗಿ ವಲಯದ ಹತ್ತಿ ಗಿರಣಿಗಳು -5
3. ಇತರೆ ಕಾರ್ಖಾನೆಗಳು -15

ಆ) 13,227 ನೌಕರರು ಕೆಲಸ ಕಳೆದುಕೊಂಡಿದ್ದಾರೆ.

ಇ) 11,170 (ಡಿಸೆಂಬರ್ 90ರ ಕೊನೆಯವರೆಗೆ)

ಈ) ಹೌದು.

**ಪ್ರತಿ ಹಳ್ಳಿಗಳಲ್ಲಿ ಸ್ಮಶಾನ ಜಾಗ ನಿಗಡಿಪಡಿಸುವ ಬಗ್ಗೆ**

1293 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಪ್ರತಿ ಹಳ್ಳಿಗಳಲ್ಲೂ ಕಡ್ಡಾಯವಾಗಿ ಸ್ಮಶಾನ ಜಾಗಗಳನ್ನು ನಿಗದಿಪಡಿಸುವ ಬಗ್ಗೆ ಸರ್ಕಾರ ಶೀಘ್ರ ಕ್ರಮ ಕೈಗೊಳ್ಳುವುದೇ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು)

ಅ) ಸರ್ಕಾರವು ಈ ಬಗ್ಗೆ ಕ್ರಮ ಕೈಗೊಳ್ಳುವುದು.

**ಮುಜರಾಯಿ ದೇವಸ್ಥಾನಗಳ ಸಂಖ್ಯೆ**

1292 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕರ್ನಾಟಕ ರಾಜ್ಯದಲ್ಲಿರುವ ಮುಜರಾಯಿ ದೇವಸ್ಥಾನಗಳೆಷ್ಟು?*

*ಆ) ಈ ದೇವಸ್ಥಾನಗಳಿಗೆ ಬರುವ ವರಮಾನವೆಷ್ಟು?*

*ಇ) ಈ ದೇವಸ್ಥಾನಗಳ ಅಭಿವೃದ್ಧಿಯ ಬಗ್ಗೆ ಸರ್ಕಾರ ಸಮಗ್ರ ಯೋಜನೆಯನ್ನು ತಯಾರಿಸಿದೆಯೇ?*

*ಈ) ಈ ಮುಜರಾಯಿ ದೇವಸ್ಥಾನಗಳ ಅರ್ಚಕರ ಸಂಬಳ ಕಡಿಮೆ ಇರುವುದರಿಂದ ಜಾಸ್ತಿ ಮಾಡಲು ಸರ್ಕಾರ ಯೋಚಿಸಿದೆಯೇ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಗಳು):

ಅ) 41366.

ಆ) ರೂ. 15,02,89,083-00.

ಇ) ಇಲ್ಲ.

ಈ) ಇಲ್ಲ. (ಅರ್ಚಕರ ಸಂಬಳ ಆಯಾ ದೇವಾಲಯದ ಆದಾಯಕ್ಕೆ ಅನುಗುಣವಾಗಿರುತ್ತದೆ. ದೇವಾಲಯದ ಆದಾಯಕ್ಕೂ ಮೀರಿ ಅರ್ಚಕರ ಸಂಬಳ ನೀಡಲು ಕಾಯ್ದೆಯಲ್ಲಿ ಅವಕಾಶ ಇಲ್ಲ).

**ಜಿಲ್ಲಾ ವಿಂಡಗಣೆಯ ಬಗ್ಗೆ**

1294 - ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಸರ್ಕಾರಕ್ಕೆ ಜಿಲ್ಲಾ ವಿಂಗಡಣೆಯ ವರದಿ ಬಂದಿದೆಯೇ?*

*ಆ) ಈ ವರದಿಯಲ್ಲಿ ಗುರುತಿಸಿರುವ ಹೊಸ ಜಿಲ್ಲೆಗಳು ಯಾವು ಯಾವುವು?*

*ಇ) ಈ ಹೊಸ ಜಿಲ್ಲೆಗಳು ಯಾವ ಅಸ್ತಿತ್ವಕ್ಕೆ ಬರುತ್ತವೆ?*

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು):

ಅ) ಹೌದು.

ಆ) ಪಟ್ಟಿ ಲಗತ್ತಿಸಿದೆ.